## ಮಕ್ಕಳಿಗೆ ಸಂಸ್ಕಾರ ಕಲಿಸಿ

ಚಂದನ ಕಾರ್ಯಕ್ರಮದಲ್ಲಿ ಚೆಂದದಿಂದ ಪ್ರಸಾರವಾಗುತ್ತಿರುವ ಅತ್ಯುತ್ತಮ ಕಾರ್ಯಕ್ರಮ 'ಥಟ್ ಅಂತ ಹೇಳಿ'. ಡಾ. ನಾ. ಸೋಮೇಶ್ವರ ಅವರು ಪ್ರಾರಂಭಿಸುವ ಮುನ್ನ ಭಾಗವಹಿಸಿದ ವಿದ್ಯಾರ್ಥಿಗಳಿಗೂ ಸಹ ಪರಿಚಯಿಸಿ ಕೊಡುವ ಸಮಯದಲ್ಲಿ ತುಂಬು ಹೃದಯದಿಂದ ಎರಡು ಕೈ ಜೋಡಿಸಿ ನಮಸ್ಕಾರ ಹೇಳುತ್ತಾರೆ. ಆದರೆ ಭಾಗವಹಿಸಿದ ವಿದ್ಯಾರ್ಥಿಗಳು ಯಾರೂ ಪ್ರತಿಯಾಗಿ ಅವರಿಗೆ 'ನಮಸ್ಕಾರ' ವನ್ನು ಹೇಳುವುದಿಲ್ಲ. ಇದನ್ನು ನೋಡಿದ ನಮಗೆ ತುಂಬಾ ಬೇಸರವಾಗುತ್ತದೆ. ಪೋಷಕರು ವಿದ್ಯಾರ್ಥಿಗಳಿಗೆ ಪ್ರತಿನಮಸ್ಕಾರ ಹೇಳಲು ತಿಳಿಸುವುದು ಸಮಂಜಸವೆಂದು ನನ್ನ ಅನಿಸಿಕೆ.

–ಸಿ.ಎಸ್. ರಾಜೇಂದ್ರ, ಮೈಸೂರು

## ಕಲಾ ಪ್ರೌಢಿಮೆ

ಚಂದನ ವಾಹಿನಿಯಲ್ಲಿ ಇತ್ತೀಚೆಗೆ 'ಶುಭೋದಯ ಕರ್ನಾಟಕ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಇಂದುಶ್ರೀ ತಮ್ಮ ಮಾತನಾಡುವ ಗೊಂಬೆ ಟಿಂಕುವಿನ ಜೊತೆ ಹಾಜರಿದ್ದರು. ಮಾತನಾಡುವ ಗೊಂಬೆಯ ಕುರಿತು ಮತ್ತು ಅದರ ಜೊತೆ ತಮ್ಮ ಧ್ವನಿಯನ್ನು ಅಳವಡಿಸಿದ ರೀತಿಯನ್ನು ವಿವರಿಸಿದರು. ಆಶ್ಚರ್ಯವೆಂದರೆ ಪ್ರೇಕ್ಷಕರಿಗೆ ಗೊಂಬೆ ಮಾತನಾಡುವಂತೆ ಮಾತ್ರ ತೋರುತ್ತದೆ. ಒಬ್ಬರೇ ಮಾತನಾಡುವ ಕುರಿತು ಅನುಮಾನ ಬರುವುದಿಲ್ಲ. ಒಮ್ಮೆಲೇ ಮೂರು ಗೊಂಬೆಗಳ ಸಂಭಾಷಣೆಯನ್ನು ಹೇಳುತ್ತಾರೆ. ಅದು ಅವರ ಕಲಾನೈಪುಣ್ಯಕ್ಕೆ ವಿಶಿಷ್ಟ ಮಾದರಿಯಾಗಿದೆ. ಅವುಗಳ ವಯಸ್ಸಿಗೆ ತಕ್ಕಂತೆ ಧ್ವನಿಗಳ ಪ್ರಯೋಗ ಮಾಡುವ ಅವರ ಧ್ವನಿ ಪರಿವರ್ತನೆಯ ವಿಶಿಷ್ಟ ಶೈಲಿಯನ್ನು ನಾವು ಮೆಚ್ಚಲೇ ಬೇಕು.

–ಕೆ.ಪಿ. ರಾಮಗುಂಡಿ, ಬೈಲಹೊಂಗಲ

ವಾರದ ಪತ್ರ

## ಇದೆಂತಹ ಆಟ!

'ಬಿಗ್ ಬಾಸ್' ಸಮಾಜಕ್ಕೆ ಏನು ಕೊಡುಗೆ ಕೊಡುತ್ತದೆ ಎನ್ನುವುದೇ ತಿಳಿಯದಾಗಿದೆ. ಸ್ವಲ್ಪ ಹೊತ್ತು ಏನೋ ಆಟವಾಡುತ್ತಾರೆ, ನಂತರ ಜಗಳ ಶುರುವಾಯ್ತು ಅಂದರೆ ಅತಿರೇಕಕ್ಕೆ ಹೋಗುತ್ತದೆ. ಒಂದೊಂದು ಆಟ ಹೀಗಿರುತ್ತೆ, ಮೈಮೇಲೆ ಎಚ್ಚರದಪ್ಪಿ ತಲೆ ತಿರುಗಿ ಬೀಳುತ್ತಾರೆ. ನಂತರ ಎಲ್ಲರೂ ಉಪಚಾರ ಮಾಡುತ್ತಾರೆ. 14ರ ಕಂತಿನಲ್ಲಿ 5 ಮಂದಿಗೆ ಅವರ ಆತ್ಮೀಯರು ಯಾರೇ ಪತ್ರ ಬರೆದರೂ ಅವರು ಪತ್ರ ಓದಬಾರದು. ಅವರ ಕಣ್ಣ ಮುಂದೆಯೇ ಬೆಂಕಿಗೆ ಹಾಕಬೇಕಂತೆ! ಇದು ಎಂಥ ಆಟ. ಎಂಥ ವಿಕೃತ ಮನಸ್ಸು. ಯಾರೋ ಮನೆಯಲ್ಲಿ ಹುಷಾರಿಲ್ಲ ಅಂತ ಬರೆದಿರಬಹುದು; ಯಾರದೋ ಹೆಂಡತಿ ಮಕ್ಕಳ ಸಲುವಾಗಿ ಬರೆದಿರಬಹುದು; ಯಾರದೋ ಗೆಳತಿ ಬರೆದಿರುತ್ತಾಳೋ.. ಏನೇ ಇರಲಿ ಅವರ ಕಣ್ಣೆದುರಿಗೇ ಅವರ ಪತ್ರ ಬೆಂಕಿಗೆ ಹಾಕಿದರೆ ಟಿ.ವಿ. ನೋಡುವ ಮನೆ ಮಂದಿಗೆ ಹೇಗೆ ಅನಿಸಿರಬಹುದು? ಸಮೀರ ಆಚಾರ್ಯರ, ನಿವೇದಿತಾಳ ಅಳು ಎಂತಹ ಕಲ್ಲು ಹೃದಯದವರನ್ನೂ ಕರಗಿಸಿ ಅಳುವಂತೆ ಮಾಡಿತು.

–ರುಕ್ಮಿಣಿ ಕೃ.ದೇಶಪಾಂಡೆ, ಗೋಕಾಕ್

## ಭಾವೋದ್ವೇಗದ 'ಡ್ರಾಮಾ'

ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿದ್ದ 'ಡ್ರಾಮಾ ಜ್ಯೂನಿಯರ್ಸ್ ಸೀಸನ್ 2'ರ ಸೆಮಿಫೈನಲ್‌ನ ಕಂತಿನಲ್ಲಿ ಮಕ್ಕಳು ಭಾವೋದ್ವೇಗಕ್ಕೊಳಗಾದರು. ತಾವು ಮತ್ತೆ ಇಲ್ಲಿ ಅಭಿನಯಿಸಲು ಸಾಧ್ಯವಿಲ್ಲ ಎಂಬ ಭಾವನೆಯಿಂದ ಮಕ್ಕಳಲ್ಲದೆ, ಪೋಷಕರು, ತೀರ್ಪುಗಾರರೂ ಸಹ ಭಾವೋದ್ವೇಗಕ್ಕೆ ಒಳಗಾದರು. ಅವರಷ್ಟೇ ಅಲ್ಲದೆ ಕಾರ್ಯಕ್ರಮ ವೀಕ್ಷಿಸುವವರ ಕಣ್ಣಾಲಿಗಳು ತುಂಬಿ ಬಂದಿದ್ದವು.

–ವಿಭಾ ಮುರಳೀಧರ್, ತುಮಕೂರು

## ಕೇಶ ವಿನ್ಯಾಸ ನೈಜವಾಗಿರಲಿ

ಟಿವಿ ಧಾರಾವಾಹಿಗಳ ನಾಯಕಿ ಇರಲಿ, ಖಳನಾಯಕಿ ಪಾತ್ರಧಾರಿ ಇರಲಿ ಎಲ್ಲರ ತಲೆಯ ಮೇಲೂ ಒಂದೊಂದು ವಿಗ್ ಹೇರಿ ಕೆಟ್ಟ ಕೇಶ ವಿನ್ಯಾಸ ಮಾಡಿರುತ್ತಾರೆ. ಇರುವ ಕೂದಲನ್ನೆ ನೀಟಾಗಿ ಬಾಚಿ ವಿನ್ಯಾಸ ಮಾಡಿದರೆ ಸಾಲದೇ! ಒಂದು ವಾರವಾದರೂ ಒಂದೇ ಬಟ್ಟೆಯಲ್ಲಿ ಇರುತ್ತಾರೆ. ಪ್ರತಿ ದಿವಸ ಡ್ರೆಸ್ ಚೇಂಜ್ ಮಾಡಲಿ. ಧಾರಾವಾಹಿಗಳಲ್ಲಿ ಮಾತಿನ ಮಧ್ಯೆ ಹಿನ್ನೆಲೆ ಸಂಗೀತ ಬೇರೆ. ಮಾತುಗಳು ಸರಿಯಾಗಿ ಕೇಳಿಸುವುದಿಲ್ಲ. ಇದು ನಿಲ್ಲಲಿ.

–ಎ.ವಿ. ನಾಗರತ್ನ, ಹಾಸನ

## ಹಿಂಸೆ ಕೂಡದು

ಕಲರ್ಸ್‌ನ 'ಫ್ಯಾಮಿಲಿ ಪವರ್' ಕಾರ್ಯಕ್ರಮದಲ್ಲಿ ಹತ್ತು ಲಕ್ಷ ಗೆಲ್ಲಲು ಮಕ್ಕಳಿಗೆ ತೊಂದರೆ ನೀಡುತ್ತಾರೆ. ಆಟದ ಹಂತ ನೋಡಿ ಬೇಜಾರಾಗಿದೆ. ದಯವಿಟ್ಟು ಅದನ್ನ ನಿಲ್ಲಿಸಿ. ಮಕ್ಕಳಿಗೆ ಬೇರೆ ಕಾರ್ಯಕ್ರಮ ಇರಲಿ.

–ಜಯಲಕ್ಷ್ಮಿ, ರಾಮದುರ್ಗ

## ಧಾರಾವಾಹಿಗೆ ವಿದಾಯ

ಮೂರು ವರ್ಷದ ಹಿಂದ 'ಲಕ್ಷ್ಮಿ ಬಾರಮ್ಮ' 'ಅಗ್ನಿ ಸಾಕ್ಷಿ' ಆಸಕ್ತಿ ಹುಟ್ಟಿಸಿದ್ದವು. ಈ ಧಾರಾವಾಹಿಗಳಿಂದ ಲಾಭ ಇಲ್ಲ ಅಂತ ಗೊತ್ತಿದ್ದರೂ ಅವುಗಳನ್ನು ನೋಡುವುದು ಅಭ್ಯಾಸವಾಗಿತ್ತು. ಅವುಗಳಲ್ಲಿನ ದ್ವೇಷ, ಅಸೂಯೆ, ಸಿಟ್ಟು, ಹೆಣ್ಣನ್ನು ತುಂಬಾ ಕ್ರೂರತನದಿಂದ ನೋಡುವುದು, ಹೆಣ್ಣೇ ಅತೀವ ಕ್ರೂರಿಯಾಗಿರುವುದು, ಅನ್ಯಾಯ ಮಾಡಿ ಸಂತಸ ಪಡುವುದು, ಕೊಲೆಗೈದು ಸಂಭ್ರಮಿಸುವುದು, ನೋವನುಣಿಸಿ ನಗುವನ್ನು ಬಿಂಬಿಸುವ ರೀತಿ ನನ್ನ ಮನಸ್ಸಿಗೆ ಬೇಸರ ತರಿಸಿವೆ. ಆದ್ದರಿಂದ 2018ರಿಂದ ಧಾರಾವಾಹಿಯನ್ನು ನೋಡಬಾರದೆಂಬ ತೀರ್ಮಾನಕ್ಕೆ ಬಂದಿದ್ದೇನೆ.

–ಡಿ. ಶಾರದಮ್ಮ ಕಂಪಾಲಿ, ದಾವಣಗೆರೆ

## ಕಿಚ್ಚನ ಮಾತಿಗೆ ಸಾಟಿಯಿಲ್ಲ

ಕಲರ್ಸ್‌ನಲ್ಲಿ ಮೂಡಿಬರುತ್ತಿರುವ 'ವಾರದ ಕಥೆ... ಕಿಚ್ಚನ ಜೊತೆ' ಜನಪ್ರಿಯತೆಗೆ ಬಹುಶಃ ನಿರೂಪಕನ ಮಾತಿನ ಶೈಲಿ ಮೂಲ ಕಾರಣವಿರಬಹುದು. 'ಬಿಗ್ ಬಾಸ್' ಮನೆಯಲ್ಲಿ ವಿಧವಿಧವಾದ ಟಾಸ್ಕ್‌ಗಳಲ್ಲಿ ಭಾಗವಹಿಸಿ ಅಂತಿಮವಾಗಿ ವಿಜಯಲಕ್ಷ್ಮಿಯನ್ನು ವರಿಸುವ ಗುರಿಯಿಟ್ಟಿರುವ ಸ್ಪರ್ಧಿಗಳ ಮನೋಭಾವವನ್ನು ಅರ್ಥೈಸಿಕೊಂಡು, ಅವರ ಸುಪ್ತ ಭಾವನೆಗಳಿಗೆ ಧಕ್ಕೆ ಬರದ ಹಾಗೆ ತನ್ನದೇ ಶೈಲಿಯಲ್ಲಿ ಸಂಭಾಷಣೆಯಲ್ಲಿ ತೊಡಗಿ, ವಾದ–ವಿವಾದಗಳನ್ನು ಸಂಯಮದಿಂದ ಆಲಿಸಿ, ವಿವಾದಗಳನ್ನು ಬಗೆಹರಿಸುವ ಚತುರತೆಯೇ ಬಿಗ್ ಬಾಸ್ ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ ಎಂದರೆ ತಪ್ಪಾಗದು. ನಟನೆಯ ನಡುವೆ ಸತತವಾಗಿ ನಿರೂಪಣೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿರುವ 'ಕಿಚ್ಚಾ ಸುದೀಪ್' ಅವರಿಂದ ಬಿಗ್ ಬಾಸ್ ಕುಟುಂಬ ಹಾಗೂ ಕಾರ್ಯಕ್ರಮವನ್ನು ವೀಕ್ಷಿಸುತ್ತಿರುವವರೂ ಪಾಠ ಕಲಿಯಬಹುದು. ನಟ–ನಿರೂಪಕನಿಗೆ ಅಭಿನಂದನೆಗಳು.

–ನಳಿನಿ ಆರ್. ಮಾಗಲ್ ಸಕಲೇಶಪುರ

## ವಾರಕ್ಕೆ ಒಂದೇ ಕೇಸ್!

ಝೀ ಕನ್ನಡದಲ್ಲಿ 'ಪತ್ತೇದಾರಿ ಪ್ರತಿಭಾ' ಮೊದ ಮೊದಲು ಸಂಸಾರ ತಾಪತ್ರಯಗಳನ್ನು ಸಮರ್ಪಕವಾಗಿ ನಿಭಾಯಿಸುತ್ತಾ, ಲವಲವಿಕೆಯಿಂದ ಓಡಾಡಿಕೊಂಡು, ವಾರಕ್ಕೆ ಒಂದೆರಡು ಪ್ರಕರಣಗಳನ್ನಾದರೂ ಪತ್ತೆ ಹಚ್ಚಿ, ಅಪರಾಧಿಗಳನ್ನು ಬಯಲಿಗೆಳೆಯುತ್ತಿದ್ದರು. ಆದರೆ, ಈಗೀಗ ಸಂಸಾರ ತಾಪತ್ರಯಗಳು ಅಷ್ಟಾಗಿ ಕಾಣುತ್ತಿಲ್ಲ. ಮೇಲಾಗಿ, ಮುಂಚಿನ ಲವಲವಿಕೆಯೂ ಇಲ್ಲ. ಈಗ ವಾರಕ್ಕೆ ಒಂದೇ ಕೇಸ್ ಮುಗಿಸುವುದಕ್ಕೇ ಸಮಾಧಾನ ತಾಳುತ್ತಿದ್ದಾರೆ ಎನಿಸುತ್ತದೆ. ಮೇಲಾಗಿ, ವಾರಕ್ಕೆ ಎರಡು ದಿನ (ಶನಿವಾರ ಮತ್ತು ಭಾನುವಾರ) ರಜೆ ಬೇರೆ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ಮಾಡುವುದರಿಂದ, ಅಪರಾಧಿಗಳ ಸಂಖ್ಯೆ ಹೆಚ್ಚಾಗುವುದಿಲ್ಲವೆ? ಮಾಡಬೇಕಾದ ಕೆಲಸವನ್ನು, ಮಾಡಬೇಕಾದ ಸಮಯದಲ್ಲಿ, ಮಾಡದೇ ಹೋದರೆ, ಆ ಕೆಲಸಕ್ಕೆ ಯಾವುದೇ ಬೆಲೆಯೂ ಇರುವುದಿಲ್ಲ ಎಂಬುದನ್ನು ಹೇಳಬೇಕಾದ ಅಗತ್ಯವಿದೆಯೆ?

–ಉಡುಪಿ ಅನಂತೇಶ ರಾವ್, ಬೆಂಗಳೂರು.